**ಹಬ್ಬದ ಋತುವಿನಲ್ಲಿ ಲಕ್ಷಾಂತರದ ಗ್ರಾಹಕರನ್ನು ತಲುಪಲು ಪೀಠೋಪಕರಣ ಕ್ಲಸ್ಟರ್‌ಗಳನ್ನು ಸಂಪರ್ಕಿಸಿರುವ ಫ್ಲಿಪ್‌ಕಾರ್ಟ್**

*ಫ್ಲಿಪ್‌ಕಾರ್ಟ್‌ನಲ್ಲಿ ಮಾರಾಟ ಮಾಡಲಿರುವ ಚುರು (ರಾಜಸ್ಥಾನ), ಸಹರಾನ್‌ಪುರ (ಯುಪಿ) ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಪೀಠೋಪಕರಣ ತಯಾರಕರು*

ಬೆಂಗಳೂರು, ಅ 14, 2020 : ಭಾರತದ ಸ್ವದೇಶಿ ಇ-ಕಾಮರ್ಸ್ ಮಾರುಕಟ್ಟೆ ಫ್ಲಿಪ್‌ಕಾರ್ಟ್, ಮುಂಬರುವ ಹಬ್ಬದ ಋತು ಮತ್ತ ಬಿಗ್ ಬಿಲಿಯನ್ ಡೇಸ್‌ಗಾಗಿ ಲಕ್ಷಾಂತರ ಗ್ರಾಹಕರನ್ನು ತಲುಪುವ ಸಲುವಾಗಿ ಪೀಠೋಪಕರಣಗಳ ವಲಯದ ಹಲವು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಮಾರಾಟಗಾರರಿಗೆ ತಮ್ಮ ವೇದಿಕೆಯಲ್ಲಿ ಅವಕಾಶ ಕಲ್ಪಿಸಿದೆ. ಇವುಗಳು ಚುರು (ರಾಜಸ್ಥಾನ), ಸಹರಾನ್‌ಪುರ (ಯುಪಿ), ಜಬಲ್‌ಪುರ ಮತ್ತು ಇಂದೋರ್ (ಎಂಪಿ) ಮತ್ತು ಸೂರತ್ (ಗುಜರಾತ್) ವರೆಗೆ ವ್ಯಾಪಿಸಿವೆ ಮತ್ತು ಮರ, ಲೋಹ ಮತ್ತು ಪ್ಲಾಸ್ಟಿಕ್ ಪೀಠೋಪಕರಣಗಳಲ್ಲಿ ಪರಿಣತಿ ಪಡೆದಿವೆ.

ಈ ಪ್ರಕ್ರಿಯೆಯ ಭಾಗವಾಗಿ, ಈ ಕ್ಲಸ್ಟರ್‌ಗಳ ಮಾರಾಟಗಾರರಿಗೆ ಫ್ಲಿಪ್‌ಕಾರ್ಟ್‌ನ ದೊಡ್ಡ ಪೂರೈಕೆ ಸರಪಳಿಗೆ ಸಂಪರ್ಕಿಸಲು ಸಣ್ಣ ಪಿಕ್ ಅಪ್ ಹಬ್‌ಗಳನ್ನು ಸ್ಥಾಪಿಸಲಾಗಿದೆ, ಇದರಿಂದಾಗಿ ಅವರಿಗೆ ಭಾರತಾದ್ಯಂತದ ಗ್ರಾಹಕರ ನೆಲೆಗೆ ಪ್ರವೇಶ ಸಿಗುತ್ತದೆ. ಈ ಮಾರಾಟಗಾರರಲ್ಲಿ ಬಹುತೇಕರು ಸೂಕ್ಷ್ಮ ಮಟ್ಟದಲ್ಲಿ ಕಾರ್ಯನಿರ್ವಹಿಸುವುದರಿಂದ ಅದು ಅವರನ್ನು ಹೆಚ್ಚಿನ ಸಂಖ್ಯೆಯ ಗ್ರಾಹಕರಿಗೆ ಸೇವೆ ಸಲ್ಲಿಸುವ ಸಾಮರ್ಥ್ಯಕ್ಕೆ ಮಿತಿ ಹೇರುತ್ತದೆ ಮತ್ತು ಸಂಪರ್ಕ ಕೊರತೆ ಮತ್ತು ವ್ಯಾಪಾರ ಜ್ಞಾನ ಕ್ಲಸ್ಟರ್‌ಗಳನ್ನು ಮೀರಿ ವಿಸ್ತರಿಸುವುದನ್ನು ನಿರ್ಬಂಧಿಸುತ್ತದೆ.

ಫ್ಲಿಪ್‌ಕಾರ್ಟ್‌ನೊಂದಿಗೆ ಸಂಪರ್ಕ ಹೊಂದುವ ಮೂಲಕ ಇವರು, ಫ್ಲಿಪ್‌ಕಾರ್ಟ್‌ನ ಆನ್‌ಬೋರ್ಡಿಂಗ್ ಬೆಂಬಲ, ತಾಂತ್ರಿಕ ಪರಿಣತಿ, ಗ್ರಾಹಕರ ಒಳನೋಟಗಳು ಮತ್ತು ವರ್ಧಿತ ವ್ಯಾಪಾರ ಬೆಳವಣಿಗೆ ಪಡೆಯುವ ಜೊತೆಗೆ, ನಿರಂತರತೆಗಾಗಿ ಮಾರುಕಟ್ಟೆಯ ರಚನೆಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ.

ಫ್ಲಿಪ್‌ಕಾರ್ಟ್‌ನ ಬಿಜಿಎಂಹೆಚ್, ಪೀಠೋಪಕರಣ ಮತ್ತು ದಿನಸಿ ವಿಭಾಗದ ಹಿರಿಯ ಉಪಾಧ್ಯಕ್ಷ ಮನೀಶ್ ಕುಮಾರ್, "ಭಾರತವು ಹಲವಾರು ಪೀಠೋಪಕರಣ ಕ್ಲಸ್ಟರ್‌ಗಳನ್ನು ಹೊಂದಿದ್ದು ಅಧಿಕೃತ, ಸ್ಥಳೀಯ ಪೀಠೋಪಕರಣ ವಸ್ತುಗಳನ್ನು ನೀಡುತ್ತದೆ ಮತ್ತು ಅವರ ಸ್ಥಳೀಯ ಆರ್ಥಿಕತೆಗೆ ಗಣನೀಯ ಕೊಡುಗೆ ನೀಡುತ್ತದೆ. ಆದರೆ, ಮಾರುಕಟ್ಟೆ ಪ್ರವೇಶದ ಅಸಮರ್ಥತೆ ಅವರಿಗೆ ದೊಡ್ಡ ಗ್ರಾಹಕರನ್ನು ತಲುಪದಂತೆ ತಡೆಯುತ್ತಿದೆ. ಸ್ವದೇಶಿ ಇ-ಕಾಮರ್ಸ್ ಮಾರುಕಟ್ಟೆಯಾಗಿ, ಈ ಮಾರಾಟಗಾರರನ್ನು ದೇಶಾದ್ಯಂತದ ಲಕ್ಷಾಂತರ ಗ್ರಾಹಕರೊಂದಿಗೆ ಸಂಪರ್ಕಿಸುವ ಮೂಲಕ ಅವರನ್ನು ಬೆಂಬಲಿಸುವುದು ಮತ್ತು ಅವರ ವ್ಯವಹಾರವನ್ನು ಹೆಚ್ಚಿಸಲು ಸಹಾಯ ಮಾಡುವುದು ನಮ್ಮ ಪ್ರಯತ್ನವಾಗಿದೆ. ಹಬ್ಬದ ಋತುವಿಗೆ ಮುಂಚಿತವಾಗಿ ಆನ್‌ಬೋರ್ಡಿಂಗ್ ಮತ್ತು ಬಿಗ್ ಬಿಲಿಯನ್ ದಿನಗಳು ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ ಹೆಚ್ಚು ತೊಂದರೆಗೊಳಗಾಗಿರುವ ಅವರ ವ್ಯವಹಾರವನ್ನು ಪುನರುಜ್ಜೀವನಗೊಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ" ಎಂದಿದ್ದಾರೆ.

ಮನೆಯಿಂದ ಕಲಿಕೆ ಮತ್ತು ಕೆಲಸದ ಅವಕಾಶಗಳು ಹೆಚ್ಚಾಗುತ್ತಿರುವುದರಿಂದ ಆನ್‌ಲೈನ್ ಪೀಠೋಪಕರಣ ಉದ್ಯಮಕ್ಕೆ ಬೇಡಿಕೆ ಏರಿಕೆಯಗಿದೆ. ಈ ಹಿನ್ನೆಲೆಯಲ್ಲಿ ಮಾರಾಟಗಾರರ ಆನ್‌ಬೋರ್ಡಿಂಗ್ ಬೇಡಿಕೆಯೊಂದಿಗೆ ಮಾರುಕಟ್ಟೆಯನ್ನು ಪೂರೈಸಲು ಸಹಾಯ ಮಾಡುತ್ತದೆ ಮತ್ತು ಗುಣಮಟ್ಟ ಮತ್ತು ಕೈಗೆಟುಕುವಿಕೆ ದರದಲ್ಲಿ ಪೀಠೋಪಕರಣ ಪಡೆಯಲು ಗ್ರಾಹಕರಿಗೆ ನೆರವಾಗುತ್ತವೆ. ಈ ಬೇಡಿಕೆಯು ಕ್ರಮೇಣ ಇತರ ವರ್ಗಗಳಾದ ಲಿವಿಂಗ್ ಮತ್ತು ಬೆಡ್‌ರೂಮ್ ಪೀಠೋಪಕರಣಗಳಿಗೂ ಹರಡುತ್ತಿದೆ, ಇದು ಮಾರಾಟಗಾರರಿಗೆ ಉತ್ತಮ ಅವಕಾಶ ನೀಡುತ್ತದೆ.

ಫ್ಲಿಪ್‌ಕಾರ್ಟ್‌ನಲ್ಲಿ ಪೀಠೋಪಕರಣಗಳ ಆಯ್ಕೆಯನ್ನು ವಿಸ್ತರಿಸಲು ಇದು ಮತ್ತಷ್ಟು ಕೊಡುಗೆ ನೀಡುತ್ತದೆ, ಇದು ಪ್ರಸ್ತುತ 3.5 ಲಕ್ಷಕ್ಕೂ ಹೆಚ್ಚು ಉತ್ಪನ್ನಗಳನ್ನು ಹೊಂದಿದೆ ಮತ್ತು 9,000 ಕ್ಕೂ ಹೆಚ್ಚು ಪ್ರಮುಖ ಪಿನ್‌ಕೋಡ್‌ಗಳಲ್ಲಿ ಅಳವಡಿಕೆಯ ಸೇವೆಗಳನ್ನು ಹೊಂದಿರುವ ದೇಶಾದ್ಯಂತ ಶೇ.100ರಷ್ಟು ಸೇವೆ ಮಾಡಬಹುದಾದ ಪಿನ್‌ಕೋಡ್‌ಗಳಿಗೆ ತಲುಪಿಸುತ್ತದೆ. ಮುಂದುವರಿದು, ಈ ಗ್ರಾಹಕರಿಗೆ ಫ್ಲಿಪ್‌ಕಾರ್ಟ್ ನಂತರ ಪಾವತಿಸಿ, ವೆಚ್ಚರಹಿತ ಇಎಂಐ ಮತ್ತು ಡೆಬಿಟ್ ಕಾರ್ಡ್ ಇಎಂಐ ಸೌಲಭ್ಯಗಳನ್ನು ಕೂಡ ಒದಗಿಸಲಾಗುತ್ತದೆ.

ಈ ಕ್ರಮವು ಕೇಂದ್ರ ಸರ್ಕಾರದ 'ಆತ್ಮನಿರ್ಭರ್ ಭಾರತ' ಅಥವಾ ಸ್ವಾವಲಂಬಿ ಭಾರತದ ಪರಿಕಲ್ಪನೆಗೆ ಕೈಜೋಡಿಸುತ್ತದೆ ಮತ್ತು ಫ್ಲಿಪ್‌ಕಾರ್ಟ್ ಭಾರತದ ಆರ್ಥಿಕತೆಯ ಬೆನ್ನೆಲುಬಾಗಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಮಾರಾಟಗಾರರನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. 'ಸ್ಥಳೀಯ' ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಇತರ 10 ಕ್ಷೇತ್ರಗಳ ಪೈಕಿ ಪೀಠೋಪಕರಣ ಕ್ಷೇತ್ರದ ಮೇಲೆ ಹೆಚ್ಚಿನ ಗಮನ ಹರಿಸುವುದಾಗಿ ಈ ಹಿಂದೆ ಸರ್ಕಾರ ಘೋಷಿಸಿತ್ತು.

## About the Flipkart Group

The Flipkart Group is one of India's leading digital commerce entities and includes group companies Flipkart, Myntra, and PhonePe. Started in 2007, Flipkart has enabled millions of consumers, sellers, merchants and small businesses to be a part of India's e-commerce revolution. With a registered customer base of over 200 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs has driven us to innovate on many industry firsts. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, and PhonePe, India's fastest growing digital payments platform, the Flipkart Group is steering the transformation of commerce in India through technology.

**For more details contact: media@flipkart.com**